ಆ) ಪೌರಾಯುಕ್ತರು, ನಗರಸಭೆ, ಹೊಸಪೇಟೆ ಇವರು ನಿವೇಶನ ಹಾಗೂ ಕಟ್ಟಡ ಮೌಲ್ಯ ₹ 3,56,12,356.00 ಗಳನ್ನು ಲೋಕೋಪಯೋಗಿ ಇಲಾಖೆಗೆ ಪಾವತಿ ಮಾಡಿದ ನಂತರ ನಿಯಮಾನುಸಾರ ಹಸ್ತಾಂತರ ಕ್ರಮ ಕೈಗೊಳ್ಳಲಾಗುವುದು.

ಬಳ್ಳಾರಿ–ಹೊಸಪೇಟೆ ರಸ್ತೆ ದುರಸ್ತಿಗೊಳಿಸುವುದು

1794(2180); ಆನಂದ ಸಿಂಗ್ (ವಿಜಯನಗರ–ಬಳ್ಳಾರಿ)

ಅ) ಬಳ್ಳಾರಿ–ಹೊಸಪೇಟೆ ರಾಷ್ಟ್ರೀಯ ಹೆದ್ದಾರಿಯು ಸಂಚಾರಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯಲ್ಲಿ ದುರಸ್ತಿ ಮಾಡಿ ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಸಂಪೂರ್ಣ ಮಾಹಿತಿ ನೀಡುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗೆ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಅನುದಾನದ ವಿವರಗಳನ್ನು ನೀಡುವುದು;

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬಂದಿದೆ

ಆ) ಸದರಿ ರಸ್ತೆಯಲ್ಲಿ 2014–15ನೇ ಸಾಲಿನಲ್ಲಿ 13.60 ಕಿ.ಮೀ. ನಿಯತಕಾಲಿಕ ನವೀಕರಣ ಕಾಮಗಾರಿ ಮತ್ತು 33.25 ಕಿ.ಮೀ. ಉದ್ದದ ರಸ್ತೆಯನ್ನು (ಆಯ್ದ ಭಾಗಗಳಲ್ಲಿ) ದುರಸ್ತಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಲಾಗಿರುತ್ತದೆ; ಮತ್ತು ಸದರಿ ರಸ್ತೆಯ ಆಯ್ದ ಭಾಗಗಳಲ್ಲಿ ಸುಮಾರು 59.00 ಕಿ.ಮೀ. ಉದ್ದದ ರಸ್ತೆಯನ್ನು ದುರಸ್ತಿಪಡಿಸಲು ₹ 11.36 ಕೋಟಿ ವೆಚ್ಚದ ಅಂದಾಜು ಪಟ್ಟಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಸದರಿ ರಸ್ತೆಯ ಶಾಸ್ವತ ಪರಿಹಾರವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೊಸಪೇಟೆಯಿಂದ ಬಳ್ಳಾರಿ

ಮಾರ್ಗವಾಗಿ ಆಂಧ್ರ ಪ್ರದೇಶ ಗಡಿಯವರೆಗಿನ ರಾಹೆ–63ನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಸದರಿ ಕಾಮಗಾರಿಯ ಗುತ್ತಿಗೆ ಅನುಮೋದನೆ ಹಂತದಲ್ಲಿದ್ದು, ಶೀಘ್ರದಲ್ಲಿ ಇ.ಪಿ.ಸಿ., ಗುತ್ತಿಗೆಯಡಿ ಟೆಂಡರ್ ಆಹ್ವಾನಿಸಲು ಕ್ರಮ ವಹಿಸಲಾಗುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚವು ಈ ಕೆಳಕಂಡಂತಿದೆ;–

ವರ್ಷ	ಅನುದಾನ ₹ ಲಕ್ಷಗಳಲ್ಲಿ	ವೆಚ್ಚ ₹ ಲಕ್ಷಗಳಲ್ಲಿ
2012–13	80.60	79.45
2013–14	1193.22	1178.47
2014–15	789.00	789.00

ಹೆಚ್ಚುವರಿ ಬಡ್ಡಿ ವಸೂಲಿ

1795(384); ಶ್ರೀ ಅಂಗಾರ ಎಸ್. (ಸೂಳ್ಯ)

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು ಇವರು 2004–05 ರಿಂದ 2008–09 ರವರೆಗೆ ರೈತರಿಗೆ ನೀಡಲಾದ ಕೃಷಿ ಸಾಲ (ಬೆಳೆ ಸಾಲ) ಮೇಲೆ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ಸರ್ಕಾರದ ಆದೇಶದ ವಿರುದ್ಧವಾಗಿ 0.5% ಹೆಚ್ಚುವರಿಯಾಗಿ ಬಡ್ಡಿಯನ್ನು ವಸೂಲಿ ಮಾಡಲು ಸರ್ಕಾರ ಅನುಮತಿ ನೀಡಿದೆಯೇ? ನೀಡದೇ ಇದ್ದಲ್ಲಿ ಸರ್ಕಾರದ ಆದೇಶದ ವಿರುದ್ಧವಾಗಿ ಹೆಚ್ಚುವರಿಯಾಗಿ ಬಡ್ಡಿ ಸಂಗ್ರಹಿಸಲಾದ ಕೇಂದ್ರ ಸಹಕಾರಿ ಬ್ಯಾಂಕ್‌ನ ಮೇಲೆ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಆ) ಹೆಚ್ಚುವರಿಯಾಗಿ 0.5% ಬಡ್ಡಿ ಸಂಗ್ರಹಿಸಲಾದ ಹಣವೆಷ್ಟು? ಸಹಕಾರ ಸಂಘವಾರು, ವರ್ಷವಾರು ವಿವರ ನೀಡುವುದು?